ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

◆ ಪ್ರಜಾಪ್ರಭುತ್ವದ ಈ ಕಾಲದಲ್ಲೂ 'ರಾಜಯೋಗ' ಇದೆ ಎಂದಿದೆಯಲ್ಲಾ....?



ನಿಜ. ಅದು ರೆಸಾರ್ಟ್ ಸೇರಿದಾಗ ಬಿಕರಿಯಾಗುವ 'ಹರಾಜಯೋಗ' ಪದದ ಹ್ರಸ್ವ ರೂಪ.

ಬೋರೇಗೌಡ, ಸರಸ್ವತಿಪುರ

◆ ಹಣ ಸಿಗುತ್ತದೆ ಎಂದರೆ ಗೋಡ್ಸೆಗೂ ಜೈ ಅನ್ನುತ್ತಾರಲ್ಲಾ ಗುರುದೇವಾ?

ದೇಶಪ್ರೇಮ, ಸ್ವಾರ್ಥತ್ಯಾಗದ ಬದಲು ಸ್ವಾರ್ಥಪ್ರೇಮ, ದೇಶತ್ಯಾಗ ಬೆಳೆದುದರ ಫಲ.

ಪಿ. ಚಿದಾನಂದ, ಜವನಗೊಂಡನಹಳ್ಳಿ

◆ ಐಟಿ ಬಿಟಿ ಕಂಪನಿಗಳಲ್ಲಿ ಅಕ್ಕಪಕ್ಕದ ರಾಜ್ಯದವರೇ ಹೆಚ್ಚಿದ್ದಾರಲ್ಲಾ...?

ಛೆ! ಸ್ವಾತಂತ್ರ್ಯ ಬಂದು 72 ವರ್ಷಗಳಾದರೂ ನಮ್ಮಲ್ಲಿ ಪ್ರಾಂತೀಯತೆ ಬಿಟ್ಟು ರಾಷ್ಟ್ರೀಯತೆ ಮೂಡಲೇ ಇಲ್ಲವಲ್ಲ!

ಎ.ಕೆ. ಪಟ್ಟಾಭಿ, ಬೆಂಗಳೂರು

◆ ಹೆಂಡತಿ ಎಂದರೆ ಲೋಹದಿಂದ ಮಾಡಿದ ಕೋಳ ಎನ್ನುತ್ತದೆ ಚರಕ ಸೂತ್ರ. ನೀವೇನಂತೀರಿ?



ಮೋಹದಿಂದ ಕೂಡಿದ ಮೇಳ.

ಅಮರಯ್ಯ ಪತ್ರಿಮಠ, ಸುರಪುರ

◆ ಹೃದಯಕ್ಕೆ ಕಂಡರೂ ಕಣ್ಣಿಗೆ ಕಾಣದು. ಏನದು?

ಸಣಕಲರ ಹೃದಯದಲ್ಲಿ ತುಂಬಿರುವ ಕೊಲೆಸ್ಟ್ರಾಲ್.

ಎಚ್. ಆನಂದಕುಮಾರ್, ಚಿತ್ರದುರ್ಗ

◆ ಆಶ್ವಾಸನೆಗೂ ಅನುಷ್ಠಾನಕ್ಕೂ ಆಗಿಬರುತ್ತಿಲ್ಲ. ಏಕೆ?

ಆಶ್ವಾಸನೆಯಲ್ಲಿ ಆಶಯದ ವಾಸನೆಗಿಂತ ash ವಾಸನೆಯೇ ಅಡಗಿರುವುದರಿಂದ.

ಎಸ್.ಎನ್. ಮಹಾಬಲರಾವ್, ಎನ್ನಾರ್ ಪುರ

◆ 'ಮೈನೆರೆ' ಹೆಸರೇಕೆ ಬಂತೆಂದು ಹೆಸರಲ್ಲೇ ಇದೆಯಂತೆ?

ನಿಜ. ಆಗಿನಿಂದ ನೆರೆಯವರೆಲ್ಲ ಅವಳ ಮೈಯತ್ತ ಗಮನಹರಿಸುತ್ತಾರೆ ಎಂದರ್ಥ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

◆ ನರ್ಸನ್ನು ಮದುವೆಯಾದ ಡಾಕ್ಟರ್ ಅವಳನ್ನು ಸಿಸ್ಟರ್ ಎಂದು ಕರೆಯಬಹುದೆ?

18 ದಾಟಿದವಳಾದ್ದರಿಂದ ಎ ಸರ್ಟಿಫಿಕೇಟ್ ಸೇರಿಸಿ ಅಸಿಸ್ಟರ್ ಎನ್ನಬಹುದು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

◆ ಪ್ರಧಾನಿಯಾಗಬೇಕಾಗಿದ್ದವರು ಕಾಡು ಸೇರಿ ಸನ್ಯಾಸಿಯಾಗಲು ಹೊರಟಿದ್ದಾರಲ್ಲ ರಾಮ್?

ಕಾಡುವವರ ಸಹವಾಸಕ್ಕಿಂತ ಕಾಡಿನ ವಾಸವೇ ಉತ್ತಮವೆನಿಸಿತಂತೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ

◆ ಮುತ್ತಿಗೂ, ಮತ್ತಿಗೂ ವ್ಯತ್ಯಾಸವೇನು?

ಮುತ್ತು ಕಾರಣ, ಮತ್ತು ಪರಿಣಾಮ.

ಎಚ್.ಆರ್. ದೇಸಾಯಿ, ರಾಯಚೂರು

◆ ನಾವು ಮುಪ್ಪಿನ ತಂದೆತಾಯಿಗಳತ್ತ ಗಮನ ಹರಿಸಬೇಕೋ, ಯೌವನದ ಮಗಳು, ಮಗನತ್ತ ಗಮನ ಹರಿಸಬೇಕೋ?

ತಕ್ಕಡಿಯ ತಟ್ಟೆಗೆ ಭಾರ ಎತ್ತ ಬೀಳುತ್ತದೋ ಅತ್ತ ವಾಲುವುದು ಅನಿವಾರ್ಯ.

ಕೆ. ರಾಮಶೆಟ್ಟಿ, ಶಿವಮೊಗ್ಗ

◆ ಮಕ್ಕಳು ಅಮ್ಮಂದಿರ ದಿನ ಆಚರಿಸುತ್ತಾರೆ. ಅತ್ತೆಯಂದಿರ ದಿನ ಆಚರಿಸುವುದಿಲ್ಲ. ಏಕೆ?

ಅತ್ತೆಯರಿಗೆ ಸೊಸೆ/ಅಳಿಯ ಇರುತ್ತಾರೆಯೇ ವಿನಹ ಮಕ್ಕಳಿರುವುದಿಲ್ಲವಲ್ಲ!

ಕೆ.ವಿ. ಗೋವಿಂದಾಚಾರಿ, ಮೈಸೂರು

◆ ಇತ್ತೀಚೆಗೆ ಹಲವಾರು ಚಿತ್ರಮಂದಿರಗಳು ಕಲ್ಯಾಣಮಂಟಪಗಳಾಗಿ ಬದಲಾಗುತ್ತಿವೆಯಲ್ಲ, ಏಕೆ?

ಸೆಟ್ಟೇರಿ ನೂರು ದಿನ ಓಡುವ ಚಿತ್ರಕ್ಕಿಂತ ಸೆಟ್ಟೇರಿ ನೂರ್ಕಾಲ ಬಾಳುವ ದಂಪತಿಗೆ ಆದ್ಯತೆ ನೀಡುವ ಉದ್ದೇಶವಂತೆ.

## ಬಹುಮಾನಿತ ಪ್ರಶ್ನೆ

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು

◆ ಸಂಸಾರಸ್ಥ ಸನ್ಯಾಸಿಯಾದರೆ ಪರವಾಯಿಲ್ಲ. ಸನ್ಯಾಸಿ ಸಂಸಾರಸ್ಥನಾದರೆ?

ಸಿಸಿಟಿವಿಗೆ ಸಿಲುಕುವುದಕ್ಕಿಂತ ಇದು ಸಾವಿರ ಪಾಲು ಶ್ರೇಷ್ಠ. ಮಠದ ಮರ್ಯಾದೆ ಉಳಿಯಿತಲ್ಲ.

ವಿದ್ಯಾ ಎನ್. ಪೈ, ಕಾಸರಕೋಡು

◆ ವೃತ್ತಿಯಿಂದ ಅನ್ನ. ಪ್ರವೃತ್ತಿಯಿಂದ...?

ಫುಲ್ ಚಿತ್ರಾನ್ನ.

ಮೋಹನರಾಜು ಎಸ್.ಎ. ಶಂಕರಘಟ್ಟ

◆ ನಂಬಿದ ಮಿತ್ರನಿಗೆ ದ್ರೋಹ ಬಗೆಯುವುದು ಸರಿಯೇ ರಾಮ್‌ಜೀ?

ಸರಿಯಲ್ಲ. ಆದರೆ ನಂಬದೆಯೇ ಇದ್ದವರಿಗೆ ಮೋಸ ಮಾಡಲು ಆಗುವುದೇ ಇಲ್ಲವಲ್ಲ!

ಎನ್.ವಿ. ಶ್ರೀನಿವಾಸ್, ಮೈಸೂರು

◆ ನಿಂಬೆಹಣ್ಣುಗಳಿಂದ ದೆವ್ವಗಳನ್ನು ಓಡಿಸಬಹುದಂತೆ. ನಿಂಬೆ ಗಿಡಕ್ಕೇ ದೆವ್ವ ಮೆಟ್ಟಿಕೊಂಡರೆ?



ಬೇರುಸಹಿತ ಗಿಡವನ್ನು ವಿಧಾನಸೌಧದ ಮುಂದೆ ಇರಿಸಿ. ಸಮಾನಮನಸ್ಕರ ಕಂಪನಿಯಾದರೂ ದೊರಕಲಿ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

◆ ಸಮಯ ನಿಲ್ಲಿಸುವ ಶಕ್ತಿ ರಾಜಕೀಯ ನಾಯಕರಿಗೆ ಇದ್ದಿದ್ದರೆ?

ಸಿಬಿಐ ರೈಡ್ ಮಾಡಲು ಬಂದ ತಕ್ಷಣ ಕಾಲವನ್ನು ನಿಲ್ಲಿಸಿಬಿಡುತ್ತಿದ್ದರು.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

◆ ಚುನಾವಣೆ ಗೆಲ್ಲಲು ವ್ಯಕ್ತಿಯೊಬ್ಬ ತನ್ನ ಸಾಧನೆಗಳನ್ನು ಹೇಳದೆ ಅನ್ಯರ ವೈಫಲ್ಯವನ್ನೇ ಎತ್ತಾಡುವುದು ಎಷ್ಟು ಸರಿ?

ಹ್ಹ! ಚುನಾವಣೆಯಲ್ಲಿ ಸನ್ನಡತೆಯನ್ನು ಅಪೇಕ್ಷಿಸುವುದೇ ಹಾಸ್ಯಾಸ್ಪದ. Everything is fair in love, war & elections.

■ ರಾಮ್